R.A.No.15/2021 PW-1
Date: 19.03.2024

ದಿನಾಂಕಃ **11.01.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ನಂಬರ್ 3 ರ ಮೇಲೆ ಸಾಕ್ಷಿಃ**

**ಮುಖ್ಯ ವಿಚಾರಣೆಃ ಮೇಲ್ಮನವಿದಾರರ ಪರ ಶ್ರೀ ಎಂ.ಸಿ.ಕೆ. ವಕೀಲರಿಂದಃ**

7. ನನ್ನ ಸಾಕ್ಷ್ಯ ಹೇಳಿಕೆ ಬಾಬ್ತು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ಹೇಳಿಕೆ ಮೇರೆಗೆ ಈ ಪ್ರಮಾಣ ಪತ್ರಿಕೆಯನ್ನು ತಯಾರಿಸಲಾಗಿದೆ. ಇದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿವೆ.

8. ಸಾಕ್ಷಿ ಈ ಕೇಸಿಗೆ ಸಂಬಂಧಪಟ್ಟ ದಾಖಲೆಗಳ ಪ್ರಮಾಣೀಕೃತ ನಕಲುಗಳನ್ನು ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.

| ಕ್ರಮ ಸಂಖ್ಯೆ | ದಾಖಲೆಗಳ ವಿವರ | ನಿಶಾನೆ |
|---|---|---|
| 1. | Certified copy of judgment and decree in O.S. 220/1991 | ನಿಶಾನೆ ಪಿ-1 |
| 2. | Certified copy of Plaint in O.S. 220/1991 | ನಿಶಾನೆ ಪಿ-2 |
| 3. | Certified copy of entire Order sheet in O.S. 220/1991 | ನಿಶಾನೆ ಪಿ-3 |
| 4. | Certified copy of Death Certificate of Dombayya Poojary | ನಿಶಾನೆ ಪಿ-4 |
| 5. | Certified copy of Death Certificate of Abbakku | ನಿಶಾನೆ ಪಿ-5 |
| 6. | Certified copy of Order sheet in R.A.No.16/2002 | ನಿಶಾನೆ ಪಿ-6 |

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

(ಎದುರುದಾರರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KADK010038722022/truecopy/order-1.pdf

www.ecourtsindia.com

<u>ದಿನಾಂಕಃ **19-03-2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು</u>.

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಸಿ.ಕೆ. ವಕೀಲರಿಂದಃ</u>**

9. ನಾನು ತಂದೆಯ ಪಾಲಿನ ಬಗ್ಗೆ ಸಾಕ್ಷಿ ನುಡಿಯಲು ಬಂದಿದ್ದೇನೆ. ನನ್ನ ತಂದೆ ಡೊಂಬಯ್ಯ ಪೂಜಾರಿಯವರಿಗೆ ಮೂರು ಹೆಣ್ಣು ಮಕ್ಕಳು ಇದ್ದಾರೆ. 1991 ರಿಂದ ನನ್ನ ತಂದೆಯವರು ಮರಣ ಹೊಂದುವ ತನಕ ನಾವೆಲ್ಲರೂ ಒಟ್ಟಿಗೆ ವಾಸ ಮಾಡುತ್ತಿದ್ದೆವು. ಹರೀಶ್ ಪೂಜಾರಿಯವರು ಕೇಸು ಹಾಕಿದ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಕೇಸು ಹಾಕಿದ ಬಗ್ಗೆ ನಮಗೇನು ಹೇಳಿರುವುದಿಲ್ಲ. ಸದರಿ ಕೇಸಿಗೆ ಸಂಬಂಧಿಸಿದ ಜಾಗದಲ್ಲಿ ನನ್ನ ತಂದೆಗೆ ಪಾಲು ಇದೆ. ಆ ಕಾಲಕ್ಕೆ ವಕೀಲರನ್ನು ನೇಮಿಸಿ ಕೇಸು ನಡೆಸುತ್ತಿದ್ದ ಬಗ್ಗೆ ನನಗೇನು ಗೊತ್ತಿಲ್ಲ. ಸದರಿ ಕೇಸು ತೀರ್ಪು ಮತ್ತು ಡಿಕ್ರಿಯಾಗಿರುವ ವಿಚಾರ ನನಗೆ ಈಗ ಒಂದು ವರ್ಷದ ಹಿಂದೆ ತಿಳಿದಿದೆ.

10. ಸದ್ರಿ ಕೇಸಿಗೆ ಸಂಬಂಧಿಸಿದಂತೆ ನಾನು ವಕೀಲರ ಬಳಿ ಹೋಗಿದ್ದೇನೆ. ಸದ್ರಿ ತೀರ್ಪಿಗೆ ಸಂಬಂಧಿಸಿದಂತೆ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕೇಸಿನ ಬಗ್ಗೆ ನನ್ನ ವಕೀಲರಿಗೆ ನಾನು ಮತ್ತು ನನ್ನ ಅಕ್ಕ ಹಾಗೂ ಅಕ್ಕನ ಮಗ ಮಾಹಿತಿ ನೀಡಿರುತ್ತೇವೆ. ನಮ್ಮ ಕುಟುಂಬದ ದೈವಾರಾಧನೆ ಕಾರ್ಯಕ್ಕೆ ನಾವೆಲ್ಲರೂ ಒಟ್ಟಿಗೆ ಸೇರುತ್ತೇವೆ. ಈ ಹಿಂದೆ ಎರಡು ವರ್ಷದ ಹಿಂದೆ ನಾವೆಲ್ಲರೂ ಆ ರೀತಿ ಒಟ್ಟಿಗೆ ಸೇರಿದ್ದೆವು, ನಂತರ ಸೇರಿಲ್ಲ. ಜಾಗವನ್ನು ನಾನು ನೋಡಿದ್ದೇನೆ, ಅದರ ಆರ್.ಟಿ.ಸಿ. ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. FDT 15/2022 ಪಾಲಿನ ಬಗ್ಗೆ ಫೈನಲ್ ಡಿಕ್ರಿಗೆ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಕೇಸಿನ ಬಗ್ಗೆ ನನಗೆ ವೇದಾ ಎನ್ನುವವರು ಒಂದು ಕಾರ್ಯಕ್ರಮದಲ್ಲಿ ನನ್ನನ್ನು ಭೇಟಿಯಾಗಿ ಹೇಳಿದ ನಂತರ ತಿಳಿದು ಬಂದಿತು.

This is a True Copy of the Court Records Online. Authenticated @ districts.ecourtsindia.com/cnr/KADK010038722022/truecopy/order-1.pdf

www.ecourtsindia.com





11. ಈ ದಿನ ನನ್ನ ಜೊತೆಗೆ ನನ್ನ ಅಣ್ಣ ಚಂದ್ರಹಾಸ್ ಜೆ. ಕೋಟ್ಯಾನ್ ಬಂದಿದ್ದಾರೆ. ಈ ಕೇಸಿನಲ್ಲಿ ಚಂದ್ರಹಾಸ್ ಜೆ. ಕೋಟ್ಯಾನ್ 2 ನೇ ಪ್ರತಿವಾದಿಯಾಗಿದ್ದಾರೆ ಎಂದರೆ ಸರಿ. ಸದರಿ 2 ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ತಾವೇ ಆಗಲೀ ಅಥವಾ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

12. ನನ್ನ ತಂದೆಯವರ ಮರಣದ ನಂತರ ಅವರ ವಾರೀಸುದಾರರ ಮಾಹಿತಿಯನ್ನು ವಕೀಲರಿಗೆ ನೀಡದ ಕಾರಣ, ನನ್ನ ಹೆಸರು ಡಿಕ್ರಿಯಲ್ಲಿ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. 20 ವರ್ಷ ತಡವಾಗಿ ನ್ಯಾಯಾಲಯಕ್ಕೆ ಹಾಜರಾದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಚಂದ್ರಹಾಸ ಜೆ ಕೋಟ್ಯಾನ್ ರವರ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರ್.ಟಿ.ಸಿ. ಯಲ್ಲಿ 2 ನೇ ಪ್ರತಿವಾದಿಯವರು ಹೆಸರನ್ನು ಬೇರೆಯವರಿಗೆ ಗೊತ್ತಾಗದ ರೀತಿಯಲ್ಲಿ ಬದಲಾಯಿಸಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣಾ ಸಾಕ್ಷಿಗಾಗಿ ನನ್ನ ವಕೀಲರಿಗೆ, ನಾನು ಮತ್ತು ನನ್ನ ಅಕ್ಕನ ಮಗ ಮಾಹಿತಿ ನೀಡಿದ್ದೇವೆ. ಸದರಿ ಅಪೀಲು ಕಾಲಮಿತಿಗೆ ಮೀರಿದ್ದು, ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯಗಳೆಲ್ಲ ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 9 ರಿಂದ 24 ನೇ ಎದುರುದಾರರ ಪರ ವಕೀಲರಿಂದಃ</u>

(9 ರಿಂದ 24 ನೇ ಎದುರುದಾರರ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.)

This is a True Copy of the Court Records Online. Authenticated @ districts.ecourtsindia.com/cnr/KADK010038722022/truecopy/order-1.pdf

R.A.No.15/2021 PW-1
Date: 19.03.2024

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KADK010038722022/truecopy/order-1.pdf

www.ecourtsindia.com